‘ಬಹಳ ದಿನಗಳ ನಂತರ ಹೊರಗೆ ಬಂದಿದ್ದನಲ್ವಾ? ಸುಸ್ತಾಗಿ ಕಲ್ಲುಬೆಂಚಿನ ಮೇಲೆ ಕುಳಿತಿದ್ದಾನೆ. ಯಾರಾದ್ರೂ ಅವನಿಗೆ ನೀರು ಕೊಡಿ.’

‘ಸತ್ಯಭಾಮ ನೀರು ತೆಗೆದುಕೊಂಡು ಹೋಗಿ ಕೊಡಿ. ನಾನು ಕಾಫಿ ತರ್ತೀನಿ.’

ಸತ್ಯಭಾಮ ರಾವ್‌ಗೆ ನೀರು ಕೊಟ್ಟು ಪಕ್ಕ ಕುಳಿತು ಅವರ ಬೆನ್ನು ಸವರುತ್ತಾ ಕೇಳಿದರು. ‘ತುಂಬಾ ಸುಸ್ತಾಗಿದೆಯಾ?’

‘ಹಾಗೇನಿಲ್ಲ, ಅಭ್ಯಾಸ ತಪ್ಪಿಹೋಗಿತ್ತಲ್ವಾ ಅದಕ್ಕೆ ಒಂದು ತರಹ ಆಯ್ತು. ಬಾ ಒಳಗೆ ಹೋಗೋಣ.’

ಸತ್ಯಭಾಮ ಅವರು ಏಳಲು ಸಹಾಯ ಮಾಡಿದರು.

‘ಬಾರಯ್ಯ ಕಾಫಿ ಕುಡಿ. ಈಗ ಧಾರಾವಾಹಿ ನೋಡೋಣ.’

‘ನೀನು ಧಾರಾವಾಹಿ ನೋಡ್ತೀಯಾ?’

‘ರಮಾಗೆ ಕಂಪನಿ ಕೊಡುವುದಕ್ಕೆ ನೋಡ್ತೀನಪ್ಪ. ಧಾರಾವಾಹಿ ಚೆನ್ನಾಗಿದ್ರೆ ಎಂಜಾಯ್ ಮಾಡ್ತೀನಿ. ಡಬ್ಬಾ ಆಗಿದ್ರೆ ಕಾಮೆಂಟ್ಸ್ ಮಾಡ್ತೀವಿ.’

ಗೆಳೆಯನ ಬಲವಂತಕ್ಕೆ ರಾವ್ ಆ ದಿನ ಟಿ.ವಿ. ನೋಡಿದರು.

* * *

ಮರುದಿನ ಬೆಳಿಗ್ಗೆ ಆರೂವರೆಗೆ ಸತ್ಯಭಾಮ ಎದ್ದು ಬಂದಾಗ ಗೆಳೆಯರಿಬ್ಬರೂ ಹಾಲ್‌ನಲ್ಲಿ ಕಾಫಿ ಕುಡಿಯುತ್ತಾ ಕುಳಿತಿದ್ದರು.

‘ಗುಡ್‌ಮಾರ್ನಿಂಗ್ ವೈನಿ. ಬೇಗ ಮುಖ ತೊಳೆದು ಬನ್ನಿ, ಕಾಫಿ ಕೊಡ್ತೀನಿ.’

ಅಷ್ಟರಲ್ಲಿ ರಮಾ ಮುಖ ತೊಳೆದು ಬಂದರು. ರಾವ್ ಇಬ್ಬರಿಗೂ ಕಾಫಿ ತಂದರು.

‘ವೈನಿ ಹಾಲು ಕಾಯಿಸಿ ಡಿಕಾಕ್ಷನ್ ಹಾಕಿದ್ದೇನೆ. ಇಬ್ಬರೂ ಸೇರಿ ತರಕಾರಿ ಹೆಚ್ಚಿದ್ದೇವೆ. ನೀವು ಸಾಗು ಮಾಡುವುದೊಂದೇ ಬಾಕಿ. ಕಾಫಿ ಕುಡಿದು ರೆಡಿಯಾಗಿ ವಾಕಿಂಗ್ ಹೋಗಿ ಬರೋಣ.’

‘ನಾನು ಬರಲ್ಲ ನಾಗೇಶ್...’

‘ಎದುರಿಗಿರುವ ಪಾರ್ಕ್‌ಗೆ ಹೋಗೋಣ. ಎರಡು ಹೆಜ್ಜೆ ವಾಕ್ ಮಾಡಿ ಬೆಂಚಿನ ಮೇಲೆ ಕುಳಿತುಕೋ. ಬೆಳಗಿನ ಹಿತವಾದ ಗಾಳಿ, ಕಣ್ತುಂಬುವ ಹಸಿರು ನಿನ್ನ ಮನಸ್ಸನ್ನು ಉಲ್ಲಾಸಗೊಳಿಸತ್ತೆ.’

ರಾವ್ ಹೊರಡಲೇ ಬೇಕಾಯ್ತು. ಗೆಳೆಯನ ಸಹಾಯದಿಂದ ಆ ದಿನ ಹತ್ತು ನಿಮಿಷ ಓಡಾಡಿದರು. ಆ ದಿನ ಕಳೆಯಿತು. ಮರುದಿನ ಬೆಳಿಗ್ಗೆ ವಾಕಿಂಗ್ ಮುಗಿಸಿಕೊಂಡು ಬಂದ ನಂತರ ರಾವ್ ಹೇಳಿದರು. ‘ವೈನಿ ಏನೂ ತಿಂಡಿ ಮಾಡಬೇಡಿ. ನಾನು ಆನ್‌ಲೈನ್‌ನಲ್ಲಿ ತಿಂಡಿಗೆ ಆರ್ಡರ್ ಮಾಡಿದ್ದೇನೆ. ತಿಂಡಿ ತಿಂದ ನಂತರ ಸಿನಿಮಾಕ್ಕೆ ಹೋಗೋಣ. ಸಿನಿಮಾ ನೋಡಿ ಬರುವಾಗ ಹೋಟೆಲ್‌ನಲ್ಲಿ ಊಟ ಮಾಡಿಕೊಂಡು ಬರೋಣ.’

‘ನಾಗೇಶ್...’

‘ರಾಗ ಎಳೆಯಬೇಡ. ಒಂದು ವಾರ ನಾನು ಹೇಳಿದ ಹಾಗೆ ಕೇಳು. ನಿನ್ನ ಡಿಪ್ರೆಷನ್, ಜಡತ್ವ ಮಾಯವಾಗತ್ತೆ.’

ಒಂದು ವಾರ ನಾಗೇಶ್ ದಂಪತಿ ಇದ್ದರು. ಅವರ ಸಹವಾಸದಲ್ಲಿ ರಾವ್ ದಂಪತಿ ಬಹಳಷ್ಟು ವಿಚಾರ ಕಲಿತರು. ಗಂಡ–ಹೆಂಡತಿ ಹೇಗೆ ಒಬ್ಬರಿಗೊಬ್ಬರು ಸಹಕಾರ ನೀಡಬೇಕೆಂಬುದನ್ನು ಅರಿತರು.

‘ಒಂದು ವಿಚಾರ ತಿಳಿದುಕೋ ರಾವ್. ಈ ಇಳಿವಯಸ್ಸಿನಲ್ಲಿ ನಮ್ಮ ಕಷ್ಟ–ಸುಖಕ್ಕೆ ಸ್ಪಂದಿಸೋದು ನಮ್ಮ ಸಂಗಾತಿ ಮಾತ್ರ. ನಾವು ಮಕ್ಕಳು, ಮೊಮ್ಮಕ್ಕಳು ಅನ್ನುವ ಮೋಹ ಬಿಡಬೇಕು. ಅವರಿಗೆ ನಾವು ನೆನಪಿರಲ್ಲ. ಅವರ ಪ್ರಪಂಚದಲ್ಲಿ ಮುಳುಗಿರ್ತಾರೆ. ಅವರು ನಮ್ಮ ಮಕ್ಕಳಾಗಿದ್ದಿಂದ ಅವರನ್ನು ಓದಿಸೋದು, ನೆಲೆ ಸೇರಿಸೋದು ನಮ್ಮ ಕರ್ತವ್ಯವಾಗಿತ್ತು ಅಷ್ಟೆ. ಅವರಿಂದ ನಾವು ಪ್ರತಿಫಲ ನಿರೀಕ್ಷಿಸಬಾರದು.’

‘ಏನು ಹೇಳ್ತಿದ್ದೀಯ ನೀನು?’

‘ನೀನು ಬದಲಾಗಬೇಕು. ಬೇರೆಯವರನ್ನು ಅವಲಂಬಿಸುವುದನ್ನು ಬಿಡಬೇಕು. ನಾನೀಗ ಹೊಸ ಪ್ರಪಂಚಕ್ಕೆ ಹೊಂದಿಕೊಳ್ತಿದ್ದೇನೆ. ಆನ್‌ಲೈನ್ ಶಾಪಿಂಗ್ ಮಾಡ್ತೇನೆ. ಮೆಡಿಸನ್ಸ್, ದಿನಸಿ, ಹಣ್ಣು, ಬಟ್ಟೆ, ಬೇಕಾದ ತಿಂಡಿ, ಊಟ ಮನೆ ಬಾಗಿಲಿಗೆ ಬಂದು ಬೀಳತ್ತೆ. ಕ್ಯಾಬ್ ಬುಕ್ ಮಾಡಿಕೊಂಡು ಬೇಕಾದ ಕಡೆ ಹೋಗ್ತೀವಿ. ನಾನು ರಮಾಗೆ ಎಲ್ಲಾ ಕಲಿಸಿದ್ದೀನಿ. ಅವಳಿಗೆ ನಾನು ಏನು ಹೇಳಿದ್ದೀನಿ ಗೊತ್ತಾ?’

‘ಏನು ಹೇಳಿದ್ದೀಯಾ?’

‘ಒಂದು ವೇಳೆ ನಾನೇ ಮೊದಲೇ ಸತ್ತುಹೋದರೂ ನೀನು ಈ ಮನೆಯಲ್ಲಿ ಒಂಟಿಯಾಗಿರಬೇಕು. ನಾನು ದೈಹಿಕವಾಗಿ ನಿನ್ನಿಂದ ದೂರವಾಗಿದ್ದರೂ ಮಾನಸಿಕವಾಗಿ ನಿನ್ನ ಜೊತೆ ಇರ್ತೀನಿ. ಯಾವ ಕಾರಣಕ್ಕೂ ಮಕ್ಕಳ ಹತ್ತಿರ ಹೋಗಬೇಡ.’

‘ನೀವು ಒಪ್ಪಿದ್ದೀರಾ ರಮಾ?’ ಸತ್ಯಭಾಮ ಕೇಳಿದರು.

‘ಹೌದು ಒಪ್ಪಿದ್ದೇನೆ. ನಾವಿಬ್ಬರೂ ಬ್ಯಾಂಕ್ ಉದ್ಯೋಗಿಗಳಾಗಿದ್ದುದರಿಂದ ಇಬ್ಬರಿಗೂ ಪೆನ್ಷನ್ ಬರ್ತಿದೆ. ಮನೆ ಬಿಟ್ಟರೆ ಬೇರೆ ಆಸ್ತಿ ನಮ್ಮ ಬಳಿ ಇಲ್ಲ. ಇವರು ಸಿಂಗಪೂರ್, ದುಬೈ, ಅಮೇರಿಕಾ, ಯೂರೋಪ್ ಎಲ್ಲಾ ತೋರಿಸಿದ್ದಾರೆ. ನಾನು ಕಾಯಿಲೆ ಬಿದ್ದಾಗ ತಾಯಿಯಂತೆ ನೋಡಿಕೊಂಡಿದ್ದಾರೆ. ಇದು ನಮ್ಮ ಸ್ವಯಾರ್ಜಿತ ಆಸ್ತಿ. ಈ ಆಸ್ತೀನ್ನ, ಅಂದರೆ ಮನೆಯನ್ನು ಅನಾಥಾಲಯಕ್ಕೆ ಬರೆದಿದ್ದೇವೆ. ಮಕ್ಕಳಿಂದ ದೂರವೇ ಇದ್ದೇವೆ.’

ರಾವ್‌ಗೆ ನಾಗೇಶ್ ಸಾಕಷ್ಟು ಧೈರ್ಯ ತುಂಬಿದರು.

‘ಮಕ್ಕಳಿಂದ ದೂರವಾಗಿರೂಂತ ನಾನು ಹೇಳ್ತಿರೋದು ನಿನ್ನ ಒಳ್ಳೆಯದಕ್ಕೆ. ಅವರ ಸಂಬಂಧ ಕಳೆದುಕೋಂತ ನಾನು ಹೇಳ್ತಿಲ್ಲ. ಅವರಾಗಿ ಹತ್ತಿರ ಬಂದರೆ ನಗ್ತಾ ನಗ್ತಾ ಮಾತಾಡಿಸು. ನೀನಾಗಿ ನೀನು ಅವರನ್ನು ಹುಡುಕಿಕೊಂಡು ಹೋಗಬೇಡ.’

‘ನೋಡೋಣ ಏನೇನಾಗತ್ತೋ?’ ಎಂದರು ರಾವ್.

‘ವೃದ್ಧಾಪ್ಯ ಶಾಪಾಂತ ಎಲ್ಲರೂ ಅಂತಾರೆ. ನಾವಿಬ್ಬರೂ ಚೆನ್ನಾಗಿದ್ದರೆ ಅದು ವರಾಂತ ನನಗೆ ಅನ್ನಿಸತ್ತೆ. ಈ ವಯಸ್ಸಿನಲ್ಲಿ ಸಂಗಾತಿಯ ಸಾಮೀಪ್ಯ ಅತಿ ಅತ್ಯಗತ್ಯ. ಯೌವನದ ದಿನಗಳಲ್ಲಿ ನಾವು ತಪ್ಪು ಮಾಡಿರಬಹುದು. ಅದನ್ನು ಮರೆತು ಕ್ಷಮಿಸಿ, ಒಬ್ಬರಿಗೊಬ್ಬರು ಆಸರೆಯಾಗಿ ನಿಲ್ಲಬೇಕು. ಸೆಕೆಂಡ್ ಇನ್ನಿಂಗ್ಸ್ ಆರಂಭಿಸು. ಬದುಕು ಆರಾಮ ಅನ್ನಿಸತ್ತೆ.’

ಊಟ ಮಾಡಿಕೊಂಡು ನಾಗೇಶ್–ರಮಾ ಹೊರಟರು. ಅಂದು ರಾತ್ರಿ ರಾವ್–ಸತ್ಯಭಾಮ ಒಟ್ಟಿಗೆ ಊಟ ಮಾಡಿದರು.

ಮರುದಿನ ಸತ್ಯಭಾಮ ಏಳುವ ಹೊತ್ತಿಗೆ ರಾವ್ ಅಡುಗೆ ಮನೆಯಲ್ಲಿದ್ದರು. ‘ಸತ್ಯ ಕಾಫಿ ತೊಗೋ.’

ಹೆಂಡತಿಗೆ ಕಾಫಿ ಕೊಟ್ಟ ರಾವ್ ಪೇಪರ್ ಹಿಡಿದು ಕುಳಿತರು.

‘ರೀ ಏನು ತಿಂಡಿ ಮಾಡಲಿ?’

‘ಏನೂ ಮಾಡಬೇಡ. ಆನ್‌ಲೈನ್‌ನಲ್ಲಿ ತಿಂಡಿ ಆರ್ಡರ್ ಮಾಡಿದ್ದೀನಿ.’

‘ಓ ಥ್ಯಾಂಕ್ ಯು.’

ತಿಂಡಿ ತಿಂದು ಸತ್ಯಭಾಮ ಟಿ.ವಿ. ಹಾಕಿದರು.

ಒಂದು ತಿಂಗಳು ಕಳೆಯಿತು. ವಿಭಾ ತಾಯಿಗೆ



ಫೋನ್ ಮಾಡಿದಳು. ‘ಅಮ್ಮ ನಾನು ಮುಂದಿನ ವಾರ ಬರ್ತೀನಿ.’

‘ಯಾವಾಗ ಬರ್ತೀಯ?’

‘ಭಾನುವಾರ ಬರ್ತೀನಿ. ನೀನು ಬಟ್ಟೆ ಬರೆ ಪ್ಯಾಕ್ ಮಾಡಿಕೊಂಡಿರು.’

‘ವಿಭಾ, ನಾನು ಮಂಗಳೂರಿಗೆ ಬರಲ್ಲ. ನಿಮ್ಮ ತಂದೆ ಜೊತೇನೇ ಇರ್ತೀನಿ.’

‘ಅಮ್ಮ ಏನು ಹೇಳ್ತಿದ್ದೀಯ?’

‘ನಿಜಾನೇ ಹೇಳ್ತಿದ್ದೀನಿ. ಈಗ ಹೆಚ್ಚು ಮಾತಾಡಕ್ಕೆ ಬಿಡುವಿಲ್ಲ. ನಾನು ಕ್ಯಾಬ್ ಬುಕ್ ಮಾಡಿದ್ದೀನಿ. ಇಬ್ಬರೂ ಮೂವಿಗೆ ಹೊರಟಿದ್ದೇವೆ.’

‘ಮೂವಿಗಾ?’

‘ಹುಂ. ನೀನು ಭಾನುವಾರ ಖಂಡಿತಾ ಬಾ. ಬೈ...’

ವಿಭಾ ಕಾಲ್ ಕಟ್ ಮಾಡಿದಳು. ಅವಳ ಕಣ್ಣುಗಳು ಆಶ್ಚರ್ಯದಿಂದ ಅರಳಿದ್ದವು.

ಪ್ರತಿಕ್ರಿಯಿಸಿ: feedback@sudha.co.in